# ಎಸ್.ಎಸ್.ಎಲ್.ಸಿ ಗಣಿತ
# ಅಧ್ಯಾಯವಾರು ಸಂಭಾವ್ಯ ಪ್ರಶ್ನೆಗಳು
## ಸಂಖ್ಯಾಶಾಸ್ತ್ರ

1. ಒಬ್ಬ ವಿದ್ಯಾರ್ಥಿಯು ಪ್ರಥಮ ಭಾಷೆಯಲ್ಲಿ 65 ಅಂಕಗಳನ್ನು, ವಿಜ್ಞಾನ ವಿಷಯದಲ್ಲಿ 50 ಅಂಕಗಳನ್ನು, ಸಮಾಜವಿಜ್ಞಾನದಲ್ಲಿ 55 ಅಂಕಗಳನ್ನು ಹಾಗೂ ಗಣಿತದ ವಿಷಯದಲ್ಲಿ ಕೆಲವು ಅಂಕಗಳನ್ನು ಪಡೆದಿರುತ್ತಾನೆ. ನಾಲ್ಕು ವಿಷಯಗಳಲ್ಲಿ ಅವನು ಪಡೆದಿರುವ ಸರಾಸರಿ ಅಂಕಗಳು 60 ಆದರೆ ಗಣಿತದ ವಿಷಯದಲ್ಲಿ ಅವನು ಪಡೆದಿರುವ ಅಂಕಗಳು :

   A) 65 B) 60 C) 50 D) 70

2. "ಕೇಂದ್ರೀಯ ಪ್ರವೃತಿಯ" ಮೂರು ಅಳತೆಗಳಿಗಿರುವ ಪ್ರಾಯೋಗಿಕ ಸಂಬಂಧವು.

   A) 3 ಮಧ್ಯಾಂಕ = ಬಹುಲಕ + 2 ಸರಾಸರಿ

   B) 2 ಸರಾಸರಿ = ಬಹುಲಕ + 3 ಮಧ್ಯಾಂಕ.

   C) 2 ಮಧ್ಯಾಂಕ = 2 ಬಹುಲಕ + 3 ಸರಾಸರಿ.

   D) ಬಹುಲಕ = 3 ಸರಾಸರಿ – ಮಧ್ಯಾಂಕ.

3. ಈ ಕೆಳಗೆ ಕೊಟ್ಟಿರುವ ಆವೃತಿ ವಿತರಣಾ ಪಟ್ಟಿಯಲ್ಲಿ "ಮಧ್ಯಾಂಕವಿರುವ" ವರ್ಗಾಂತರವು

| ವರ್ಗಾಂತರ | 0 – 10 | 10 – 20 | 20 – 30 | 30 – 40 | 40 – 50 |
|---|---|---|---|---|---|
| ಆವೃತ್ತಿ | 5 | 8 | 12 | 15 | 20 |

   A) 10 – 20 B) 20 – 30 C) 30 – 40 D) 0 – 10

4. ಈ ಕೆಳಗೆ ಕೊಟ್ಟಿರುವ ಸಂಚಿತ ಆವೃತ್ತಿ ವಿತರಣಾ ಕೋಷ್ಠಕದಲ್ಲಿ ರೂ 20,000 ದಿಂದ ರೂ 25,000 ದ ವರೆಗೆ ಆದಾಯವ್ಯಾಪ್ತಿ ಹೊಂದಿರುವ ಕುಟುಂಬಗಳ ಸಂಖ್ಯೆ

| ಮಾಸಿಕ ಆದಾಯ | ಕುಟುಂಬಗಳ ಸಂಖ್ಯೆ |
|---|---|
| ರೂ 5000 ಕ್ಕಿಂತ ಅಧಿಕ | 100 |
| ರೂ 10000 ಕ್ಕಿಂತ ಅಧಿಕ | 85 |
| ರೂ 15000 ಕ್ಕಿಂತ ಅಧಿಕ | 69 |
| ರೂ 20000 ಕ್ಕಿಂತ ಅಧಿಕ | 50 |
| ರೂ 25000 ಕ್ಕಿಂತ ಅಧಿಕ | 37 |
| ರೂ 30000 ಕ್ಕಿಂತ ಅಧಿಕ | 15 |

   A) 35 B) 22 C) 13 D) 19



LIVEWORKSHEETS

5. ಒಬ್ಬ ವಿದ್ಯಾರ್ಥಿಯು ಕಿರು ಪರೀಕ್ಷೆಯ **6** ವಿಷಯಗಳಲ್ಲಿ ಪಡೆದ ಸರಾಸರಿ ಅಂಕಗಳು **18**, ಅವನು **5** ವಿಷಯದಲ್ಲಿ ತೆಗೆದ ಅಂಕಗಳ ಮೊತ್ತ **86** ಆದರೆ **6**ನೇ ವಿಷಯದಲ್ಲಿ ಅವನು ಪಡೆದ ಅಂಕಗಳು

A) 20 B) 21 C) 18 D) 22

6. ಒಂದು ವರ್ಗೀಕೃತ ದತ್ತಾಂಶಗಳ ಮಧ್ಯಾಂಕ ಮತ್ತು ಬಹುಲಕಗಳು ಕ್ರಮವಾಗಿ **26** ಮತ್ತು **29** ಆದರೆ ಈ ದತ್ತಾಂಶಗಳ ಸರಾಸರಿಯು

A) 27.5 B) 28.4 C) 25.8 D) 24.5

7. ಕೇಂದ್ರಿಯ ಪ್ರವೃತಿಗಳ ಮೂರು ಅಳತೆಗಳ ನಡುವಿನ ಪ್ರಾಯೋಗಿಕ ಸಂಬಂಧವು :

A) 2 ಮಧ್ಯಾಂಕ = ಬಹುಲಕ + 3 ಸರಾಸರಿ

B) 3 ಮಧ್ಯಾಂಕ = ಬಹುಲಕ + 2 ಸರಾಸರಿ

C) ಮಧ್ಯಾಂಕ = ಬಹುಲಕ + ಸರಾಸರಿ

D) ಮಧ್ಯಾಂಕ = ಬಹುಲಕ - ಸರಾಸರಿ

8. **5, 8, 14, 16, 19** ಮತ್ತು **20** ಈ ಪ್ರಾಪ್ತಾಂಕಗಳ ಮಧ್ಯಾಂಕವು

A) 15 B) 16 C) 14 D) 17

9. ಈ ಕೆಳಗಿನ ಆವೃತ್ತಿ ವಿತರಣೆಯಲ್ಲಿ ಬಹುಲಕವಿರುವ ವರ್ಗಾಂತರ

| ವರ್ಗಾಂತರ | ಆವೃತ್ತಿ |
|---|---|
| $5-15$ | 2 |
| $15-25$ | 3 |
| $25-35$ | 6 |
| $35-45$ | 5 |
| $45-55$ | 4 |

A) $15-25$ B) $25-35$ C) $35-45$ D) $45-55$

10. **5, 15, 8, 12, 13, 7** ಈ ಪ್ರಾಪ್ತಾಂಕಗಳ ಸರಾಸರಿ

A) 60 B) 70 C) 10 D) 30

11. ವರ್ಗೀಕೃತ ದತ್ತಾಂಶಗಳ ಬಹುಲಕವನ್ನು ಈ ಸೂತ್ರವನ್ನು ಬಳಸಿ ಕಂಡುಹಿಡಿಯಬಹುದು

A) $l-\left[\frac{f_1-f_0}{2f_1-f_0-f_2}\right]\times h$ B) $l+\left[\frac{f_1+f_0}{2f_1-f_0-f_2}\right]\times h$

C) $l+\left[\frac{f_1-f_0}{2f_1+f_0-f_2}\right]\times h$ D) $l+\left[\frac{f_1-f_0}{2f_1-f_0-f_2}\right]\times h$

12. ಒಂದು ದತ್ತಾಂಶದ ಬಹುಲಕ ಮತ್ತು ಸರಾಸರಿ ಕ್ರಮವಾಗಿ **9** ಮತ್ತು **6** ಆಗಿದೆ. ಹಾಗಾದರೆ ಆ ದತ್ತಾಂಶಗಳ ಮಧ್ಯಾಂಕವು

A) 6.5 B) 7 C) 7.5 D) 8



LIVEWORKSHEETS

13. ಈ ಕೆಳಗಿನ ನಕ್ಷೆಯು "ಕಡಿಮೆ ಇರುವ ವಿಧಾನದ" ಮತ್ತು "ಅಧಿಕ ಇರುವ ವಿಧಾನದ" ಓಜೀವ್ ನಕ್ಷೆಯನ್ನು ಪ್ರತಿನಿಧಿಸಿದರೆ, ಮಧ್ಯಾಂಕವು




Figure 1

A) 5 B) 15 C) 30 D) 35


14. $\sum f_i x_i = 325$ ಮತ್ತು $\sum f_i = 25$ ಆದರೆ ಸರಾಸರಿಯು

A) 13 B) 15 C) 10 D) 25

15. $12, 11, 10, 8, 11, 13, 11, 15, 12$ ಈ ಪ್ರಾಪ್ತಾಂಕಗಳ ಬಹುಲಕವು

A) 10 B) 15 C) 11 D) 12

16. ಈ ಕೆಳಗಿನ ನಕ್ಷೆಯು "ಕಡಿಮೆ ಇರುವ ವಿಧಾನದ" ನಕ್ಷೆಯನ್ನು ಪ್ರತಿನಿಧಿಸಿದರೆ , ಮಧ್ಯಾಂಕವು




A) 1500 B) 3500 C) 3000 D) 2000

17. $20 - 40, 40 - 60, 60 - 80$ ಈ ವರ್ಗಾಂತರಗಳ ಗಾತ್ರವು

A) 10 B) 20 C) 30 D) 40

18. ಕೆಲವು ದತ್ತಾಂಶಗಳ ಸರಾಸರಿ ಮತ್ತು ಮಧ್ಯಾಂಕ ಕ್ರಮವಾಗಿ $20$ ಮತ್ತು $22$ ಆದರೆ ಬಹುಲಕವು

A) 20 B) 26 C) 22 D) 21

19. ಒಂದು ವಿತರಣೆಯ ಅಧಿಕವಿರುವ ಮತ್ತು ಕಡಿಮೆ ಇರುವ ಓಜೀವ್‌ಗಳು $(15, 20)$ ಬಿಂದುವಿನಲ್ಲಿ ಸಂಧಿಸಿದಾಗ ಮಧ್ಯಾಂಕವು

A) 10 B) 20 C) 15 D) 35

20. $30 - 45$ ಈ ವರ್ಗಾಂತರದ ಮಧ್ಯಬಿಂದು

A) 37.5 B) 27.5 C) 40 D) 35



LIVEWORKSHEETS

21. ಈ ಕೆಳಗಿನ ಆವೃತ್ತಿ ವಿತರಣೆಯಲ್ಲಿ ಬಹುಲಕವಿರುವ ವರ್ಗಾಂತರ

| ವರ್ಗಾಂತರ | ಆವೃತ್ತಿ |
|---|---|
| $0-10$ | 3 |
| $10-20$ | 9 |
| $20-30$ | 15 |
| $30-40$ | 30 |
| $40-50$ | 18 |
| $50-60$ | 5 |

A) $40-50$  B) $20-30$  C) $30-40$  D) $50-60$

22. ಒಬ್ಬ ವಿದ್ಯಾರ್ಥಿಯು ಪ್ರಥಮ ಭಾಷೆಯಲ್ಲಿ **36** ಅಂಕಗಳನ್ನು, ವಿಜ್ಞಾನ ವಿಷಯದಲ್ಲಿ **44** ಅಂಕಗಳನ್ನು, ಸಮಾಜವಿಜ್ಞಾನದಲ್ಲಿ **75** ಅಂಕಗಳನ್ನು ಹಾಗೂ ಗಣಿತದ ವಿಷಯದಲ್ಲಿ ಕೆಲವು ಅಂಕಗಳನ್ನು ಪಡೆದಿರುತ್ತಾನೆ. ನಾಲ್ಕು ವಿಷಯಗಳಲ್ಲಿ ಅವನು ಪಡೆದಿರುವ ಸರಾಸರಿ ಅಂಕಗಳು **50** ಆದರೆ ಗಣಿತದ ವಿಷಯದಲ್ಲಿ ಅವನು ಪಡೆದಿರುವ ಅಂಕಗಳು :

A) 45  B) 40  C) 50  D) 48

23. $\mathbf{2.5, 2.3, 2.1, 2.7, 2.8, 2.5}, x, \mathbf{2.8}$ ಮತ್ತು **20** ಈ ಪ್ರಾಪ್ತಾಂಕಗಳ ಬಹುಲಕ **2.8** ಆದರೆ $x$ ಬೆಲೆಯು

A) 2.8  B) 2.7  C) 2.5  D) 2.1

24. **520, 20, 340, 190, 35, 800, 1210, 50** ಮತ್ತು **80**ಈ ಪ್ರಾಪ್ತಾಂಕಗಳ ಮಧ್ಯಾಂಕವು

A) 1210  B) 520  C) 190  D) 35

25. ಕೆಲವು ದತ್ತಾಂಶಗಳ ಸರಾಸರಿ ಮತ್ತು ಮಧ್ಯಾಂಕ ಕ್ರಮವಾಗಿ **30** ಮತ್ತು **35** ಆದರೆ ಬಹುಲಕವು

A) 30  B) 35  C) 45  D) 15

26. ಕೆಲವು ದತ್ತಾಂಶಗಳ ಬಹುಲಕ ಮತ್ತು ಸರಾಸರಿ ಕ್ರಮವಾಗಿ **8** ಮತ್ತು **9** ಆದರೆ ಮಧ್ಯಾಂಕವು

A) 8.5  B) 10  C) 26  D) $\frac{26}{3}$

27. ಈ ಕೆಳಗಿನ ಆವೃತ್ತಿ ವಿತರಣೆಯಲ್ಲಿ ಮಧ್ಯಾಂಕವಿರುವ ವರ್ಗಾಂತರ

| ವರ್ಗಾಂತರ | ಆವೃತ್ತಿ |
|---|---|
| $20-40$ | 10 |
| $40-60$ | 12 |
| $60-80$ | 20 |
| $80-100$ | 22 |

A) $20-40$  B) $40-60$  C) $60-80$  D) $80-100$



LIVEWORKSHEETS